## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 785/2024

**ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸಯ್ಯದ್ ಸಲ್ಮಾನ್ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 8 |
| ತಂದೆಯ ಹೆಸರು | ಸೈಯ್ಯದ್ ಷರ್ಫವುದ್ದಿನ್ | | |
| ವಯಸ್ಸು | 32 ವರ್ಷ | | |
| ಕೆಲಸ | ಗುಜರಿ ವ್ಯಾಪಾರ | | |
| ವಾಸಸ್ಥಳ | ಶಬ್ಬೀರ್ ನಗರ ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನನಗೆ ಚಾಸಾ–1, 2 ಮತ್ತು 4 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ದಿಃ 13.05.2024 ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ನಾನು ಮತ್ತು ಚಾಸಾ–4 ರವರು ಗುರುಪುರಕ್ಕೆ ಹೋಗುತ್ತಿದ್ದೆವು. ಆ ರೀತಿ ಹೋಗುವಾಗ ಆಜಾದ್ ನಗರದ ರಸ್ತೆಯ ಎಡಬದಿಯಲ್ಲಿರುವ ಮೀನಿನ ಅಂಗಡಿಯ ಹತ್ತಿರ ಚಾಸಾ–1 ಮತ್ತು 2 ಮತ್ತು ಆರೋಪಿತರಿಗೂ ಗಲಾಟೆ ನಡೆಯುತಿತ್ತು. ಚಾಸಾ–1 ಮತ್ತು 2 ರವರು ಮೀನು ಇವತ್ತಿನದ್ದಾ ನಿನ್ನೆಯದ್ದ ಎಂದು ಕೇಳಿದ್ದಾರೆ. ಆ ಸಮಯದಲ್ಲಿ ಮೀನಿನ ಅಂಗಡಿಯವರಾದ 1ನೇ ಆರೋಪಿಯು 4 ದಿನದ ಹಿಂದಿನ ಮೀನಾಗಿದ್ದು, ಬೇಕಿದ್ದರೆ ತೆಗೆದುಕೊಳ್ಳಿ ಇಲ್ಲವಾದರೆ ಹೋಗಿ ಎಂದು ಚಾಸಾ–1 ಮತ್ತು 2 ರವರಿಗೆ ಹೇಳಿದರು. ಆಗ ಗ್ರಾಹಕರ ಬಳಿ ಈ ರೀತಿ ಮಾತನಾಡಬೇಡಿ ಎಂದು ಚಾಸಾ–1 ರವರು 1ನೇ ಆರೋಪಿಯ ಬಳಿ ಹೇಳಿದರು. ಆಗ ನಾನು ಹಾಗೇಯೇ ಮಾತನಾಡುವುದು ಬೊಳಿಮಗ ಎಂದು 1ನೇ ಆರೋಪಿ ಚಾಸಾ–1 ಮತ್ತು 2 ರವರಿಗೆ ಅವಾಚ್ಯವಾಗಿ ಬೈದರು. 1ನೇ ಆರೋಪಿಯು ಚಾಕು ಹಿಡಿದುಕೊಂಡು ಬಂದು ಹೊಡೆಯುತ್ತೇನೆ ಎಂದು ಹೇಳಿದರು. ನಾನು ಮತ್ತು ಚಾಸಾ–4 ರವರು ಗಲಾಟೆಯನ್ನು ಬಿಡಿಸಿ ಚಾಸಾ–1 ಮತ್ತು 2ರವರನ್ನು ಗಾಡಿಯಲ್ಲಿ ಕೂರಿಸಿ ಕಳುಹಿಸುವಾಗ 1ನೇ ಆರೋಪಿಯ ಇಬ್ಬರು ತಮ್ಮಂದಿರಾದ 2 ಮತ್ತು 5ನೇ ಆರೋಪಿತರು ಒಂದು ದೊಣ್ಣೆಯೊಂದಿಗೆ ಬಂದು ಚಾಸಾ–1 ಮತ್ತು 2 ರವರಿಗೆ

ಹೊಡೆದರು. ಆಗ ಅಲ್ಲಿದ್ದ ಮಹಿಳೆಯರು ಅವರಿಗೆ ಹೊಡೆಯಿರು ಎಂದು ಹೇಳುತ್ತಿದ್ದರು. ನಾವು ಗಲಾಟೆಯನ್ನು ಬಿಡಿಸಿ ಚಾಸಾ-1 ಮತ್ತು 2 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿದೆವು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. 1ನೇ ಆರೋಪಿಯು ಚಾಸಾ-2 ರವರಿಗೆ ತೂಕದ ಬಟ್ಟಿನಿಂದ ಎದೆಯ ಭಾಗಕ್ಕೆ ಹೊಡೆದರು. ಮೇಲೆ ಹೇಳಿದ ದೊಣ್ಣೆ ಮತ್ತು ತೂಕದ ಬಟ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ಬೇರೆ ಯಾರು ಯಾರಿಗೆ ಹೊಡೆದರು ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ತೂಕದ ಬಟ್ಟಿನಿಂದ 1ನೇ ಆರೋಪಿ ಚಾಸಾ-2 ರವರ ಎದೆ ಮತ್ತು ಮುಖದ ಭಾಗಕ್ಕೆ ಹೊಡೆದರು ಎಂದರೆ ಸರಿ. ಆರೋಪಿತರೆಲ್ಲರೂ ಚಾಸಾ-1 ಮತ್ತು 2 ರವರನ್ನು ಏಕಾ ಏಕಿ ಅಡ್ಡಗಟ್ಟಿ ಹಲ್ಲೆ ಮಾಡಲು ಬಂದರು ಎಂದರೆ ಸರಿ. ಯಾಕೆ ಈ ರೀತಿ ಗಲಾಟೆ ಮಾಡುತ್ತಿದ್ದಿರಾ ಎಂದು ಕೇಳಿದಾಗ 2ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರ ಎಡಮುಂಗೈಗೆ, 3ನೇ ಆರೋಪಿ ಕೈಯಿಂದ ಅವರ ಎದೆಗೆ, 4ನೇ ಆರೋಪಿ ಕೈಯಿಂದ ಮುಖಕ್ಕೆ, 5ನೇ ಆರೋಪಿ ಕೈಯಿಂದ ಎದೆಗೆ ಮತ್ತು 6ನೇ ಆರೋಪಿ ಕೈಯಿಂದ ಹೊಟ್ಟೆಯ ಭಾಗಕ್ಕೆ ಹೊಡೆದರು ಎಂದರೆ ಸರಿ. ಜಗಳ ಬಿಡಿಸಿದ ನಂತರ ಆರೋಪಿತರೆಲ್ಲರು ಚಾಸಾ-1 ಮತ್ತು 2 ರವರಿಗೆ ಈ ದಿವಸ ಬದುಕಿಕೊಂಡಿದ್ದಿರಿ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. SNK ವಕೀಲರಿಂದಃ**

ನಾವು ಶಬ್ಬೀರ್ ನಗರದಿಂದ ಬೆಳಿಗ್ಗೆ 8-50ಕ್ಕೆ ಹೊರಟು 9 ಗಂಟೆಗೆ ಮೀನಿನ ಅಂಗಡಿಯ ಹತ್ತಿರ ಇದ್ದೆವು. ನನ್ನ ಮನೆಯಿಂದ ಘಟನಾ ಸ್ಥಳ 2 ರಿಂದ 3 ಕಿ.ಮೀ ದೂರ ಆಗಬಹುದು. ನಾವು ಹೋಗುತ್ತಿರುವಾಗ ಗಲಾಟೆ ನಡೆಯುತಿತ್ತು ನಾವು ವಾಹನವನ್ನು ನಿಲ್ಲಿಸಿ ಗಲಾಟೆ

ಬಿಡಿಸಲು ಹೋದೆವು. ವಾಹನ ನಿಲ್ಲಿಸುವ ಮೊದಲು ಗಲಾಟೆ ಯಾಕೆ ನಡೆಯುತ್ತಿತ್ತು ಎಂದು ನಮಗೆ ಗೊತ್ತಿರಲಿಲ್ಲ. ಮೀನಿನ ಅಂಗಡಿಯಲ್ಲಿ ಮಹಿಳೆಯರು ಮೀನಿನ ವ್ಯಾಪಾರ ಮಾಡುತ್ತಿದ್ದಾಗ ಚಾಸಾ-1 ಮತ್ತು 2 ರವರು ಸದರಿ ಮಹಿಳೆಯರೊಂದಿಗೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹೆಂಗಸರ ಜೊತೆ ಚಾಸಾ-1 ಮತ್ತು 2 ರವರು ಗಲಾಟೆ ಮಾಡುತ್ತಿದ್ದಾಗ ಆರೋಪಿತರು ಬಿಡಿಸಲು ಹೋದಾಗ ಚಾಸಾ-1 ಮತ್ತು 2 ರವರು ಆರೋಪಿತರೊಂದಿಗೆ ಗಲಾಟೆ ಮಾಡಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ.

ಆರೋಪಿತರು ಚಾಸಾ-1 ಮತ್ತು 2 ರವರಿಗೆ ದೊಣ್ಣೆ ಮತ್ತು ತೂಕದ ಬಟ್ಟಿನಿಂದ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೀನಿನ ಅಂಗಡಿಯಲ್ಲಿ ತಕ್ಕಡಿ ಮತ್ತು ತೂಕದ ಬಟ್ಟನ್ನು ಬಳಸುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿ ಎದೆಯ ಭಾಗಕ್ಕೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರು ನನಗೆ ಸಂಬಂಧಿಕರಲ್ಲ. ಚಾಸಾ-2 ರವರು ನನಗೆ ಪರಿಚಯ ಎಂದರೆ ಹುಣಸೂರು ಪಟ್ಟಣ ಠಾಣೆಯಲ್ಲಿ ಅವರು ಕೆಲಸ ಮಾಡುವ ಕಾರಣ ಗೊತ್ತು. ನನ್ನ ಮತ್ತು ಚಾಸಾ-2 ರವರ ಮಧ್ಯೆ ಒಳ್ಳೆಯ ಸ್ನೇಹ ಸಂಬಂಧ ಇದೆ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-2 ರವರ ಮಧ್ಯೆ ಸ್ನೇಹ ಸಂಬಂಧ ಚೆನ್ನಾಗಿರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-2 ರವರ ಮಧ್ಯೆ ಒಳ್ಳೆಯ ಸ್ನೇಹ ಸಂಬಂಧ ಇರುವ ಕಾರಣ ಚಾಸಾ-1 ಮತ್ತು 2 ರವರು ಅಲ್ಲಿದ್ದ ಮಹಿಳೆಯರೊಂದಿಗೆ ಗಲಾಟೆ ಮಾಡುತ್ತಿದ್ದ ವಾಸ್ತವ ವಿಷಯವನ್ನು ಮರೆಮಾಚಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-1 ಮತ್ತು 2 ರವರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಯಾರು ಯಾರ ಜೊತೆ ಗಲಾಟೆ ಮಾಡಿದ್ದಾರೆ ಎಂದು ವಾಸ್ತವಾಂಶ ಗೊತ್ತಿದ್ದರೂ ಕೂಡ ವಾಸ್ತವಾಂಶ ಗೊತ್ತಿದ್ದರೂ ಕೂಡ ಚಾಸಾ-1 ಮತ್ತು 2 ರವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.